(ಸಭೆಯು 3 ಗಂಟೆ 18 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಬೆಂಗಳೂರು ನಗರದ ವಿಶ್ವೇಶ್ವರಪುರಂನಲ್ಲಿರುವ ವಾಸವಿ ವಿದ್ಯಾನಿಕೇತನ ಶಾಲೆಯ ನಾಲ್ಕನೇ ಮಹಡಿಯಿಂದ ಮಗು ಕೆಳಗೆ ಬಿದ್ದು ಸತ್ತು ಹೋಗಿರುವ ಘಟನೆ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧಕ್ಷರೇ, ನಿನ್ನೆ ದಿನ ನಗರದಲ್ಲಿ ಒಂದು ಸಣ್ಣ ಮಗು ಶಾಲಾ ಕಟ್ಟಡದಿಂದ ಕೆಳಗೆ ಬಿದ್ದು ಸಾವು ಸಂಭವಿಸಿದೆ. ಇದು ಬೆಂಗಳೂರು ನಗರದಲ್ಲಿ ಸೆಂಟ್ರಲ್ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ವಿಶ್ವೇಶ್ವರಪುರಂನಲ್ಲಿ ಬರುವಂತಹ ವಾಸವಿ ವಿದ್ಯಾನಿಕೇತನ ಶಾಲೆ ಇಲ್ಲಿ 4ನೇ ಮಹಡಿಯಿಂದ ಮಗು ಆಟ ಆಡುವುದಕ್ಕೆ ಹೋಗಿ 4ನೇ ಮಹಡಿಯಿಂದ ಬಿದ್ದಿದೆ. ಬೆಂಗಳೂರು ಸಿಟಿಯಲ್ಲಿ ಗಲ್ಲಿ ಗಲ್ಲಿಗಳಲ್ಲಿ, ಬೀದಿ ಬೀದಿಯಲ್ಲಿ ಶಾಲೆಗಳು ನಡೆಯುತ್ತಿದೆ. ಕೆಳಗಡೆಯ ಅಂತಸ್ತಿನಲ್ಲಿ ಅಂದರೆ ಬಹಳ ಕೆಳಗಡೆ ಮೊದಲನೆಯ ಮಹಡಿಯಲ್ಲಿ ಸಣ್ಣಮಕ್ಕಳಿಗೆ ಶಾಲೆ ಇರಬೇಕೆಂದು ಸರ್ಕಾರದ ಆದೇಶವಿದೆ. ಯಾವ ಲಂಗುಲಗಾಮು ಇಲ್ಲದೇ ಇಡೀ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಂತೂ ಈ ತರಹ ಶಾಲೆಗಳು ನಡೆಯುತ್ತಿದೆ. ಆ ದೃಷ್ಟಿಯಿಂದ ನಿನ್ನೆ ದಿನ ಆಗಿರುವಂತಹ ಘಟನೆ ಬಗ್ಗೆ ತೀವ್ರವಾದಂತಹ ತನಿಖೆಯಾಗಬೇಕು, 1-2-3-4ನೇ ಮಹಡಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಕೆಳಗಡೆ ಮಹಡಿ ಮಾತ್ರ ಮಕ್ಕಳಿಗೆ ಎನ್ನುವಂತಹ ಕಾನೂನನ್ನು ಸರ್ಕಾರ ತರಬೇಕು. ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತಿದ್ದೇನೆ. ಇದು ಬಹಳ ದೊಡ್ಡ ರೋಧನವಾಗಿದೆ, ಇದರಿಂದ ಬಹಳ ನೋವಾಗಿದೆ. ಇವತ್ತು ಈ ಪರಸ್ಥಿತಿಯಾಗಿದೆ. ಇದರ ಬಗ್ಗೆ ಸರ್ಕಾರ ತಕ್ಷಣ ಸುತ್ತೋಲೆಯನ್ನು ಹೋರಡಿಸಬೇಕು. ಬೆಂಗಳೂರು ನಗರದಲ್ಲಿ ಆಗಲಿ ಅಥವಾ ರಾಜ್ಯದಲ್ಲಿ ಎಲ್ಲೇ ಆಗಲಿ, ಸಣ್ಣಮಕ್ಕಳಿಗೆ ಶಾಲೆಯ ಸ್ಥಳ ಎಲ್ಲಿರಬೇಕು ? ಇದರ ಬಗ್ಗೆ ತಾವು ತೀರ್ಮಾನ ಮಾಡಲಿಲ್ಲವೆಂದರೆ, ಅತ್ಯಂತ ಅನ್ಯಾಯವಾಗುತ್ತದೆ. ಅದರ ಬಗ್ಗೆ ಸರ್ಕಾರದವರು ಕ್ರಮವನ್ನು ಕೈಗೊಳ್ಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧಕ್ಷರೇ, ನಿನ್ನೆಯ ದಿವಸ ಆದ ಘಟನೆಯ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರು. ಕಳೆದ ವರ್ಷ ಒಂದು ಶಾಲೆಯಲ್ಲಿ ಕಟ್ಟಡವನ್ನು ಕಟ್ಟುವಾಗ ಇಟ್ಟಿಗೆ ಬಿದ್ದು ಒಂದು ಮಗು ಸತ್ತುಹೋಯಿತು. ಈಗ 4ನೆಯ ಮಹಡಿಯಿಂದ ಕೆಳಗಡೆ

ಬಿದ್ದು ಒಂದು ಮಗು ಸತ್ತುಹೋಯಿತು. ಕೆಳ ಅಂತಸ್ತಿನಲ್ಲಿ ಶಾಲೆಯನ್ನು ಮಾಡುವುದು ಒಂದು. ಅಲ್ಲದೇ ಮೇಲು ಅಂತಸ್ತುಗಳಲ್ಲಿ ಗ್ರಿಲ್ ಹಾಕುವಂತಹ ವ್ಯವಸ್ಥೆಯನ್ನು ಮಾಡಬೇಕು. ಕಟ್ಟಡವನ್ನು ಒಡೆಯಬೇಕೆಂದು ನಾನು ಹೇಳುವುದಿಲ್ಲ. ಏಕೆಂದರೆ ಮಕ್ಕಳು ಬೀಳದೇ ಇರುವ ಹಾಗೆ ಗ್ರಿಲ್ ಹಾಕುವಂತಹ ವ್ಯವಸ್ಥೆಯನ್ನು ಮಾಡಿ. ಕೇವಲ ಶಾಲೆಗಳಲ್ಲಿ ಮಾತ್ರವಲ್ಲ, ಇನ್ನು ಮುಂದೆ ಅಪಾರ್ಟಮೆಂಟ್ ಗಳಲ್ಲಿ ಇದರ ಬಗ್ಗೆ ಅಲೋಚನೆಯನ್ನು ಮಾಡಬೇಕಾಗುತ್ತದೆ. ಕಟ್ಟಡವನ್ನು ಕಟ್ಟುವುದಕ್ಕೆ ಪರ್ಮಿಶನ್‌ನ್ನು ಕೊಟ್ಟಾಗ ಯಾವ ಅಂತಸ್ತಿನಲ್ಲಿ ಎಷ್ಟು ಅಂತಸ್ತಿನವರೆಗೆ ಓಪನ್ ಇರಬಹುದು, ಎಷ್ಟು ಅಂತಸ್ತಿನವರೆಗೆ ಗ್ರಿಲ್‌ಗಳನ್ನು ಹಾಕಬಹುದು ಎಂಬ ಬಗ್ಗೆ ವ್ಯವಸ್ಥೆಯನ್ನು ಮಾಡದೇ ಇದ್ದರೆ, ಕಷ್ಟವಾಗುತ್ತದೆ. ಮೊನ್ನೆ ದಿನ ಗರುಡ ಮಾಲ್‌ನಲ್ಲಿ ಒಂದು ಅಪಘಾತವಾಯಿತು. ಅದೇ ರೀತಿಯಲ್ಲಿ ಅಪಘಾತಗಳು ಜಾಸ್ತಿಯಾಗುವಂತಹ ಪರಿಸ್ಥಿಯಲ್ಲಿ ನಿಯಂತ್ರಣ ಮಾಡುವ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎನ್.ಎಲ್. ನರೇಂದ್ರಬಾಬು : ಮಾನ್ಯ ಅಧಕ್ಷರೇ, ಒಂದೇ ಒಂದು ಮಾತಿನಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಮಾನ್ನ ವಾಟಾಳ್ ನಾಗರಾಜ್ ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಇದು ನಿಮಗೆ ಗೊತ್ತಾಗುವುದಿಲ್ಲವೇ? ಮಾನ್ಯ ನರೇಂದ್ರಬಾಬುರವರೆ, ತಾವು ಈ ತರಹ ಆದರೆ ಹೇಗೆ? ಮಾನ್ಯ ವಾಟಾಳ್ ನಾಗರಾಜ್ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ನಮ್ಮ ಗಮನಕ್ಕೆ ತಂದು ಮಾತನಾಡುತ್ತಿದ್ದಾರೆ.

ಶ್ರೀ ಎನ್.ಎಲ್. ನರೇಂದ್ರಬಾಬು : ನಾನು ತಮ್ಮ ಮುಖೇನ ಒಂದೇ ಒಂದು ವಿಷಯವನ್ನು ತಂದು ಒಂದೇ ಮಾತಿನಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಒಂದೊಂದೇ

ಶ್ರೀ ಎನ್.ಎಲ್. ನರೇಂದ್ರಬಾಬು : ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ನಗರ ಮತ್ತು ಇನ್ನಿತರ ಯಾವುದೇ 2 floorಗಿಂತ ಜಾಸ್ತಿ ಇರುವಂತಹ ಶಾಲೆಗಳು ಮಕ್ಕಳಿಗೆ ಸುರಕ್ಷಿತವಾಗಿಯಾ ಎಂದು ಹೇಳಿ ಒಂದು ಸಮಗ್ರ ತನಿಖೆಯಾಗುಬೇಕು ಎರಡನೆಯದಾಗಿ ಹೇಳುವುದಾದರೆ staircase sizeಗಳು ಏನಿದೆ, ಬಹಳ ಸ್ಪಷ್ಟವಾಗಿ ಗೋಚರವಾಗದೇ ಅಪಾಯದ ಪರಿಸ್ಥಿತಿಯಿದೆ. ಎಷ್ಟೋ ತಂದೆತಾಯಿಗಳು ಹೇಳಿಕೊಳ್ಳುತ್ತಿಲ್ಲ. ನಮ್ಮ ಕ್ಷೇತ್ರದ ಒಂದು ಶಾಲೆಯಲ್ಲಿ ಇಷ್ಟು ಹತ್ತಿರದಲ್ಲಿ ಕುರಿದೊಡ್ಡಿಯ ತರಹ ಮಕ್ಕಳನ್ನು

ಬಿಡುತ್ತಾರೆ. ಎರಡನೇ floor ಮಾಡುವುದರ ಬಗ್ಗೆ ಸಮಗ್ರ ತನಿಖೆಯಾಗಬೇಕು. ಇದರ ಬಗ್ಗೆ ಮಕ್ಕಳುಗಳು ಬಹಳ ಅಪಾಯಕ್ಕೆ ಸಿಲುಕುತ್ತಾರೆ. ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವುದನ್ನು ನಾನು ಗಮನಿಸಿದ್ದೇನೆ. ಇನ್ನು ಮುಂದೆ ಸರ್ಕಾರ ಈ ರೀತಿಯ ಅಹಿತಕರವಾದ ಘಟನೆಗಳು ನಡೆಯಲು ಅವಕಾಶ ಕೊಡುವುದಿಲ್ಲ. ಇದು ನಾವುಗಳು ಇದ್ದ ಕಾಲವಲ್ಲ, ಮಕ್ಕಳುಗಳು ಚಟುವಟಿಕೆಯಿಂದ ಹಾರುವುದು, ಕುಣಿಯುವುದು, ಕುಪ್ಪಳಿಸುವುದು ಒಂದು ವಿಚಿತ್ರವಾದಂತಹ ರೀತಿಯಲ್ಲಿ ಒಂದು ನಿರೀಕ್ಷೇ ಮಾಡಲಾರದಂತಹ ಬುದ್ಧಿವಂತಿಕೆಯಲ್ಲಿದ್ದಾರೆ. ಅವರಿಗೆ ಗ್ರೀಲ್ ಗಳನ್ನು ಹಾಕುವಂತಹದು 3–4 ಅಡಿ ಗ್ರೀಲ್ ಹಾಕಿ ಹೊರಗಡೆಯಿಂದ ಬೇಕಾದರೂ ಅದು ಕಾಣಲಿ, ಗ್ರಿಲ್ ಆಚೆಗೆ ಬೀಳದಂತೆ ಎತ್ತರದಲ್ಲಿ ಮಾಡಬೇಕು. ಯಾವುದೇ ಬಹುಮಹಡಿ ಕಟ್ಟಡ ಆದರೂ ಸಹ ಸುತ್ತೋಲೆಯನ್ನು ಕಳುಹಿಸಿ ಅದಕ್ಕೆ ಲೈಸನ್ಸ್‌ನ್ನು ಕೊಡಬೇಕಾದರೆ ಅವೆಲ್ಲವನ್ನು ನೋಡಿ ನೀಡುವಂತೆ ಬಿಗಿ ಬಂದೋಬಸ್ತು ಮಾಡುವ ಬಗ್ಗೆ ಖಂಡಿತವಾಗಿ ಎಚ್ಚರಿಕೆಯ ಮಾತನ್ನು ಗೌರವಾನ್ವಿತ ಸದಸ್ಯರು ಹೇಳುತ್ತಿದ್ದೀರಿ. ಶಾಲೆಗಳಲ್ಲಿ ಅಂತೂ ಎರಡನೆ ಮಹಡಿಯಲ್ಲಿ 3–4ನೇ ಮಹಡಿಗಳಲ್ಲ, ಗ್ರೌಂಡ್ ಫ್ಲೋರ್ ಆದ ಮೇಲೆ ಎಲ್ಲದಕ್ಕೂ ಕೂಡ ಈ ಬಂದೋಬಸ್ತನ್ನು ಮಾಡಲೇಬೇಕು. ಗ್ರಿಲ್ ಇರಲೇಬೇಕು. ಅದು ಎಲ್ಲಿ ಇಲ್ಲ, ಅದು ಸರ್ಕಾರಿ ಶಾಲೆಗಳಾಗಲೀ, ಖಾಸಗಿ ಶಾಲೆಗಳಾಗಲೀ ಅದನ್ನು ಮಾಡಿ ಎಂದು ಸೂಚನೆಯನ್ನು ನಮ್ಮ ಶಿಕ್ಷಣ ಇಲಾಖೆಯಿಂದ ಕಳುಹಿಸಿಕೊಡುವಂತಹದ್ದು, ಇನ್ನು ಮುಂದೆ ಬಹುಮಹಡಿ ಕಟ್ಟಡಗಳು ಸಾರ್ವಜನಿಕವಾಗಿ ಕಟ್ಟುವಂತಹ ಕಾಂಪ್ಲೆಕ್ಸ್‌ಗಳು ಏನಿವೆ, ಈ ಬಗ್ಗೆ ಸುತ್ತೋಲೆಯನ್ನು ಹೊರಡಿಸಿ, ಇವೆಲ್ಲದಕ್ಕೂ ಲೈಸೆನ್ಸ್ ಕೊಡಬೇಕಾದರೆ ಇದನ್ನು ಮಾಡಬೇಕೆಂದು ಸೂಚನೆಯನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತೇನೆ. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಎಸ್.ಎಸ್. ಪಾಟೀಲ್‌ರವರೇ ಬೇಡಿಕೆಗಳ ಬಗ್ಗೆ ತಾವು ಮಾತನಾಡುತ್ತೀರಾ ?

ಶ್ರೀ ಎಸ್.ಎಸ್. ಪಾಟೀಲ್ : ನಾನು ಸೋಮವಾರ ಮಾತನಾಡುತ್ತೇನೆ.

ಅಧ್ಯಕ್ಷರು : ಎಲ್ಲರೂ ಹೇಳಿ ಹೇಳಿ ಗಳಿಗೆಯನ್ನು ಲೆಕ್ಕವನ್ನು ಹಾಕಿಕೊಂಡು ಬಿಟ್ಟಿದ್ದೀರಿ. ಈಗ ಮಾತನಾಡುವವರು ಯಾರು? ಮಾನ್ಯ ಡಿ.ಆರ್. ಪಾಟೀಲ್‌ರವರೆ, ತಾವು ಮಾತನಾಡುತ್ತೀರಾ? ನಿಮ್ಮದು ಯಾವ ವಾರ? ಮಂಗಳವಾರ

ಮಾತನಾಡುತ್ತೀರಾ? ಮಾನ್ಯ ಶಿವರಾಂ ಬಂದಿಲ್ಲ, ಶ್ರೀ ಎನ್.ಎಸ್. ಭೋಸರಾಜು ಇಲ್ಲ, ಶ್ರೀ ಡಿ.ಸಿ. ತಮ್ಮಣ್ಣ ಇಲ್ಲ, ಶ್ರೀ ಕೃಷ್ಣಭೈರೇಗೌಡ ಇಲ್ಲ, ಶ್ರೀ ಕೆ. ಚಂದ್ರಶೇಖರ್ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧಕ್ಷರೇ, ತಮಗೆ ನೇರವಾಗಿ ಸಂಬಂಧಪಟ್ಟಿದ್ದು ಸಾರ್. ಮತದಾನಕ್ಕೆ ತಾವು ಹೋಗಿದ್ದೀರಾ ಸಾರ್ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಅದು ನನಗೆ ಸಂಬಂಧಪಟ್ಟಿರುವುದು, ನೀವೇನು ಕೇಳುವುದು?

ಶ್ರೀ ವಾಟಾಳ್ ನಾಗರಾಜ್ : ಅದು ತಮ್ಮದೇ ....

ಅಧ್ಯಕ್ಷರು : ಅದನ್ನು ಹೇಳುವುದಕ್ಕೆ ಅವಕಾಶವಿಲ್ಲ. ನೀವು ಎಲ್ಲವನ್ನೂ ಕೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ತಾವು ಅಧ್ಯಕ್ಷರಾಗಿ ....

ಅಧ್ಯಕ್ಷರು : ಅದು ನನಗೆ ಬಿಟ್ಟಿರುವುದು, ನಾಳೆ ದಿನ ನಿಮಗೆ ಗೊತ್ತಾಗುತ್ತದೆ. ಮತದಾನ ಮುಗಿದಾದ ಮೇಲೆ ತಮಗೆ ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ರಾಷ್ಟ್ರಪತಿ ಚುನಾವಣೆಯಲ್ಲಿ ....

ಅಧ್ಯಕ್ಷರು : ಆಯಿತು, ಮತದಾನ ಆದ ಮೇಲೆ ಅದರ ಬಗ್ಗೆ ತಿಳಿದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನು ವಿರೋಧ ಮಾಡುತ್ತಿಲ್ಲ. ತಾವು ಸರ್ವಸ್ವತಂತ್ರರು, ಆದ್ದರಿಂದ ತಾವು ಮತದಾನಕ್ಕೆ ಹೊಗಿದ್ರಾ ಅಥವಾ ಇಲ್ಲವೇ?

ಅಧ್ಯಕ್ಷರು : ಕುಳಿತುಕೊಳ್ಳಿ, 5 ಗಂಟೆಯಾದ ನಂತರ ತಾವು ತಿಳಿದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಈಗ ಜಾತ್ಯಾತೀತ ಜನತಾದಳದವರು ಮತದಾನಕ್ಕೆ ಹೋಗಿಲ್ಲ, ಅದ್ದರಿಂದ ತಾವು ಸರ್ವಸ್ವತಂತ್ರರು, ತಾವು ಹೋಗಿದ್ದೀರಾ?

ಅಧ್ಯಕ್ಷರು : ತಾವು 5 ಗಂಟೆಯಾದ ಮೇಲೆ ಮಾತನಾಡಿ. ಈಗಲ್ಲಾ ತಾವು ಕೇಳುವುದು. ಈಗ ಚಂದ್ರಶೇಖರ್‌ರವರು, ಶ್ರೀ ಬಸವರಾಜ ರಾಯರೆಡ್ಡಿ ಕಾಂಗ್ರೆಸ್ ಪಕ್ಷದ ಸದಸ್ಯರು ಮಾತನಾಡುವುದಕ್ಕೆ ಹೆಸರು ಕೊಟ್ಟು ಇಲ್ಲದೇ ಇದ್ದರೆ ಹೇಗೆ? ಕೆಲವರು ಸೋಮವಾರ, ಮಂಗಳವಾರ, ಬುಧವಾರ ಫಳಿಗೆ ಚೆನ್ನಾಗಿದೆ, ಎಂದು ಹೇಳುತ್ತಾ ಹೋದರೆ ಸದನವನ್ನು ಹೇಗೆ ನಡೆಸುವುದು?